# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 655 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12.12.2025. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯಿತಿಯ ಗ್ರಾಮೀಣ ಗ್ರಂಥಾಲಯಗಳಲ್ಲಿ ಎಷ್ಟು ಗ್ರಂಥಾಲಯ ಮೇಲ್ವಿಚಾರಕರು ಸೇವೆ ಸಲ್ಲಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ಗ್ರಾಮ ಪಂಚಾಯತಿಯ ಗ್ರಾಮೀಣ ಗ್ರಂಥಾಲಯಗಳಲ್ಲಿ ಒಟ್ಟು 5436 ಗ್ರಂಥಾಲಯ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿರುತ್ತಾರೆ.<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಗ್ರಂಥಾಲಯ ಮೇಲ್ವಿಚಾರಕರಿಗೆ ನೀಡುತ್ತಿರುವ ಗೌರವಧನ/ವೇತನ ಎಷ್ಟು; ಗೌರವಧನ/ವೇತನ ಹೊರತುಪಡಿಸಿ ನೀಡುತ್ತಿರುವ ಇನ್ನಿತರೆ ಸೌಲಭ್ಯಗಳೇನು; ಇವರಿಗೆ ವೇತನ ಪಾವತಿಸಲು ಪ್ರತಿ ತಿಂಗಳು ಅಗತ್ಯವಿರುವ ಒಟ್ಟು ಹಣ ಎಷ್ಟು; | ಗ್ರಂಥಾಲಯ ಮೇಲ್ವಿಚಾರಕರಿಗೆ 2025-26ನೇ ಸಾಲಿಗೆ ಕಾರ್ಮಿಕ ಇಲಾಖೆ ಮಾಸಿಕವಾಗಿ ನಿಗದಿಪಡಿಸಿರುವ ಕನಿಷ್ಠ ವೇತನ ರೂ.16,382.52/-ಗಳು ಮತ್ತು ವ್ಯತ್ಯಾಸವಾಗುವ ತುಟ್ಟಿಭತ್ಯೆ ರೂ.2818.80/-ಗಳು ಸೇರಿದಂತೆ ಒಟ್ಟು ರೂ.19,201.32/- ಗಳು ನೀಡಲಾಗುತ್ತಿದೆ.<br>ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರಿಗೆ ಕನಿಷ್ಠ ವೇತನದೊಂದಿಗೆ ನೀಡುತ್ತಿರುವ ಇನ್ನಿತರೆ ಸೌಲಭ್ಯಗಳು ಈ ಕೆಳಕಂಡಂತಿವೆ.<br>1) ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರಿಗೆ 10 ದಿನಗಳ ಸಾಂದರ್ಭಿಕ ರಜೆ, 2 ದಿನಗಳ ನಿರ್ಬಂಧಿತ ರಜೆ, ವಿವಾಹಿತ ಮಹಿಳಾ ನೌಕರರಿಗೆ 180 ದಿನಗಳ ಪ್ರಸೂತಿ ರಜೆ ಮತ್ತು ಪುರುಷ ನೌಕರರಿಗೆ 15 ದಿನಗಳ ಪಿತೃತ್ವ ರಜೆ ನೀಡಲಾಗುತ್ತದೆ.<br>2) ಈ ನೌಕರರು ಸೇವೆಯಲ್ಲಿದ್ದಾಗ ಮರಣ ಹೊಂದಿದಲ್ಲಿ ಅವರ ನ್ಯಾಯಬದ್ಧ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br>3) ಖಾಲಿ ಹುದ್ದೆ ಆಧರಿಸಿ ಅಥವಾ ಪರಸ್ಪರ ಒಪ್ಪಿಗೆಯ ಮೇಲೆ ಸೇವಾವಧಿಯಲ್ಲಿ ಒಂದು ಬಾರಿ ಜಿಲ್ಲೆಯೊಳಗೆ ಹಾಗೂ ಅಂತರ್-ಜಿಲ್ಲೆ ವರ್ಗಾವಣೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. |

| | | |
|---|---|---|
| | | 5884 ಗ್ರಂಥಾಲಯ ಮೇಲ್ವಿಚಾರಕರಿಗೆ ಕನಿಷ್ಠ ವೇತನ ಪಾವತಿಸಲು ಮಾಸಿಕ ₹ 11,29,80,566.88/- (ಹನ್ನೊಂದು ಕೋಟಿ ಇಪ್ಪತ್ತೊಂಭತ್ತು ಲಕ್ಷದ ಎಂಭತ್ತು ಸಾವಿರದ ಐದುನೂರ ಅರವತ್ತಾರು ರೂಪಾಯಿ ಎಂಬತ್ತೆಂಟು ಪೈಸೆ) ಗಳ ಅಗತ್ಯವಿರುತ್ತದೆ. |
| (ಇ) | ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ವೇತನ ಪಾವತಿ ಆಗದಿರಲು ಕಾರಣಗಳೇನು; ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ವೇತನ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | 1. ಸರ್ಕಾರದ ಆದೇಶ ಸಂಖ್ಯೆ:RDPR/425/GPA/2023 ಬೆಂಗಳೂರು, ದಿನಾಂಕ:13.02.2024ರಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಮೇಲ್ವಿಚಾರಕರಿಗೆ ದಿನಾಂಕ:04.09.2023 ರಿಂದ ಜಾರಿಗೆ ಬರುವಂತೆ ಮಾಸಿಕ ಕನಿಷ್ಠ ವೇತನ ರೂ.16,382.52/-ಗಳು ಮತ್ತು ವಾರ್ಷಿಕವಾಗಿ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು (VDA) ಪಾವತಿಸಲು ಆದೇಶಿಸಲಾಗಿರುತ್ತದೆ. ಅದರನ್ವಯ ಸರ್ಕಾರದಿಂದ ರೂ.12000/- ಗಳನ್ನು ಪಾವತಿಸಲಾಗುತ್ತಿದೆ.<br>2. ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ: ಕಪಂರಾಆ/ಅಭಿವೃದ್ಧಿ/ ಗ್ರಂಥಾಲಯ/ 262/2022, ದಿನಾಂಕ:30.12.2023 ರನ್ವಯ ಕನಿಷ್ಠ ವೇತನದ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹವಾಗುವ ಶೇಕಡಾ 6 ರ ಗ್ರಂಥಾಲಯ ಉಪಕರವನ್ನು ಜಿಲ್ಲಾ ಪಂಚಾಯತಿಗಳಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಿ ಸದರಿ ಮೊತ್ತದಿಂದ ಪಾವತಿಸಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. |
| (ಈ) | ಕಲಬುರಗಿ ಜಿಲ್ಲೆಯಲ್ಲಿ ಗ್ರಂಥಾಲಯ ನೌಕರರು ಮುಷ್ಕರ ನಡೆಸಿದ್ದು ಏಕೆ; ಅವರ ಬೇಡಿಕೆಗಳೇನು; | ಗ್ರಾಮ ಪಂಚಾಯಿತಿ ಗ್ರಂಥಾಲಯ ನೌಕರರ ಬೇಡಿಕೆಗಳು ಈ ಕೆಳಕಂಡಂತಿವೆ:-<br>1. ಪ್ರತಿ ತಿಂಗಳು ಗೌರವ ಧನ (ವೇತನ) ಹಾಗೂ ಅರಿಯರ್ಸ್ ಖಾತೆಗೆ ಜಮಾ ಮಾಡುವುದು.<br>2. ಗ್ರಂಥಾಲಯಗಳಿಗೆ ಮೂಲ ಸೌಕರ್ಯ ಒದಗಿಸುವುದು.<br>3. ಗ್ರಂಥಪಾಲಕರನ್ನು ಪಂಚಾಯಿತಿ ಸಿಬ್ಬಂದಿಗಳು ಗೌರವಯುತವಾಗಿ ನಡೆದುಕೊಳ್ಳುವ ಕುರಿತು.<br>4. ಬಾಕಿ ಉಳಿದಿರುವ ಅರಿಯರ್ಸ್ ಖಾತೆಗೆ ಜಮಾ ಮಾಡುವುದು.<br>5. ನೇರವಾಗಿ ಗ್ರಂಥಪಾಲಕರ ಖಾತೆಗೆ ವೇತನ ಪಾವತಿಸುವುದು.<br>6. ಸರಕಾರದ ಸೌಲಭ್ಯಗಳು ನೇರವಾಗಿ ಸಿಗುವಂತೆ ಮಾಡುವುದು. |
| (ಉ) | ಕಲಬುರಗಿ ಜಿಲ್ಲೆಯಲ್ಲಿ ಗ್ರಂಥಪಾಲಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು ಸರ್ಕಾರದ ಗಮನದಲ್ಲಿದೆಯೇ; ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಗಳೇನು; ಆತ್ಮಹತ್ಯೆ | ಹೌದು.<br>1. 02 ತಿಂಗಳ ವೇತನ ಪಾವತಿ ಬಾಕಿ ಇರುವ ಕಾರಣದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಡೆತ್ ನೋಟ್‌ನಲ್ಲಿ ತಿಳಿಸಲಾಗಿದೆ, ಗ್ರಂಥಾಲಯ ಮೇಲ್ವಿಚಾರಕಿಯ ಆತ್ಮಹತ್ಯೆ ಕುರಿತು ಮಳಖೇಡ ಪೋಲೀಸ್ |

| | | |
|---|---|---|
| | ಮಾಡಿಕೊಂಡ ಗ್ರಂಥಪಾಲಕಿಯ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಿದೆಯೇ? | ಠಾಣೆಯಲ್ಲಿ UDR ದಾಖಲಾಗಿದ್ದು ತನಿಖೆ ಪ್ರಗತಿಯಲ್ಲಿದೆ.<br>2. ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಗ್ರಂಥಾಲಯ ಮೇಲ್ವಿಚಾರಕಿಯ ಕುಟುಂಬ ಅವಲಂಬಿತರಿಗೆ ರೂ. 10.00 ಲಕ್ಷಗಳ ಸಹಾಯಧನವನ್ನು ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲದಿಂದ ಪರಿಹಾರ ನೀಡಲು ಠರಾವು ಪಾಸ್ ಮಾಡಲಾಗಿದೆ.<br>3. ಗ್ರಂಥಾಲಯ ಮೇಲ್ವಿಚಾರಕಿಯ ಮಗಳಿಗೆ ಅನುಕಂಪದ ಆಧಾರದ ಮೇಲೆ ಖಾಯಂ ನೌಕರಿಗಾಗಿ ಬೇಡಿಕೆ ಇಟ್ಟಿದ್ದು, ಪ್ರಸ್ತುತ ಸದರಿಯವರ ಮಗಳು ಇನ್ನೂ ಅಪ್ರಾಪ್ತ ವಯಸ್ಸಿನವರಾಗಿದ್ದು, ನಂತರ ಸರ್ಕಾರದ ಹಂತದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ:** ಗ್ರಾಅಪ 944 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಅನುಬಂಧ

## ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ವಿವರ

| ಕ್ರ. ಸಂ. | ಜಿಲ್ಲೆ ಯ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ | ಗ್ರಾಮ ಪಂಚಾಯಿತಿ ಗ್ರಂಥಾಲಯ ಕೇಂದ್ರಗಳ ಒಟ್ಟು ಸಂಖ್ಯೆ | ಗ್ರಾಮ ಪಂಚಾಯಿತಿ ಗ್ರಂಥಾಲಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 195 | 180 | 172 |
| 2 | ಬಳ್ಳಾರಿ | 100 | 100 | 84 |
| 3 | ಬೆಂಗಳೂರು ನಗರ | 85 | 86 | 77 |
| 4 | ಬೆಂಗಳೂರು( ಗ್ರಾ) | 101 | 97 | 89 |
| 5 | ಬೆಂಗಳೂರು ದಕ್ಷಿಣ | 126 | 130 | 122 |
| 6 | ಬೆಳಗಾವಿ | 500 | 486 | 425 |
| 7 | ಬೀದರ್ | 182 | 183 | 172 |
| 8 | ಚಾಮರಾಜನಗರ | 130 | 128 | 121 |
| 9 | ಚಿಕ್ಕಬಳ್ಳಾಪುರ | 157 | 153 | 141 |
| 10 | ಚಿಕ್ಕಮಗಳೂರು | 226 | 226 | 209 |
| 11 | ಚಿತ್ರದುರ್ಗ | 189 | 202 | 184 |
| 12 | ದಕ್ಷಿಣ ಕನ್ನಡ | 223 | 212 | 207 |
| 13 | ದಾವಣಗೆರೆ | 194 | 206 | 196 |
| 14 | ಧಾರವಾಡ | 146 | 140 | 105 |
| 15 | ಗದಗ | 122 | 124 | 118 |
| 16 | ಹಾಸನ | 264 | 257 | 253 |
| 17 | ಹಾವೇರಿ | 223 | 217 | 202 |
| 18 | ಕಲ್ಬುರ್ಗಿ | 261 | 262 | 235 |
| 19 | ಕೊಡಗು | 102 | 98 | 87 |
| 20 | ಕೋಲಾರ | 154 | 157 | 149 |
| 21 | ಕೊಪ್ಪಳ | 153 | 150 | 138 |
| 22 | ಮಂಡ್ಯ | 233 | 234 | 202 |
| 23 | ಮೈಸೂರು | 256 | 236 | 208 |
| 24 | ರಾಯಚೂರು | 179 | 179 | 169 |
| 25 | ಶಿವಮೊಗ್ಗ | 262 | 258 | 247 |
| 26 | ತುಮಕೂರು | 330 | 336 | 324 |
| 27 | ಉಡುಪಿ | 155 | 150 | 148 |
| 28 | ಉತ್ತರ ಕನ್ನಡ | 229 | 228 | 213 |
| 29 | ವಿಜಯಪುರ | 211 | 202 | 193 |
| 30 | ವಿಜಯನಗರ | 137 | 143 | 128 |
| 31 | ಯಾದಗಿರಿ | 122 | 124 | 118 |
| | **ಒಟ್ಟು** | **5947** | **5884** | **5436** |